# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 20 ಗಂಗಾನಗರ.ಬೆಂಗಳೂರು.

ಸಂಖ್ಯೆ: ಸ.ಅ/ವಾ-20/ಪಿ.ಆರ್/ 06 /2022-23 ದಿನಾಂಕ:-25-07-20222

## ವಾರ್ಡ್ ಸಮಿತಿ ಸಭೆಯ ನಡವಳಿಗಳು

**ವಿಷಯ:-** ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21 ದಿನಾಂಕ: 21-09-2020. ರವರ ಆದೇಶದಂತೆ ದಿನಾಂಕ: 25-07-2022 ರಂದು ವಾರ್ಡ್ ನಂ:20, 3ನೇ ಕ್ರಾಸ್, 108 ಬಸ್ ನಿಲ್ದಾಣದ ಹತ್ತಿರ ಹೆಚ್.ಎಂ.ಟಿ ಬಡಾವಣೆ ಗಂಗಾನಗರ, ಬೆಂಗಳೂರು ರಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

### ::ಸಭೆಗೆ ಹಾಜರಾಗಿದ್ದವರ ವಿವರಗಳು::

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1. | ಶ್ರೀ. ತಿರುಮಲೇಶ್ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2. | ಶ್ರೀ.ಮೋಹನ್ ಕುಮಾರ್ | ಸದಸ್ಯ ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರು ವಾಡ್ ನಂ: 20 |
| 3. | ಕಿಶೋರ್‌ಗೌಡ.ಎಸ್ ಪಾಟೀಲ್ | ಸಹಾಯಕ ಅಭಿಯಂತರರು (ಕಿಯಾನಿಕ್ಸ್), ವಾರ್ಡ್-20 |
| 4. | ಶ್ರೀ. ಕೃಷ್ಣಮೂರ್ತಿ ಬಿ.ಎಂ | ಕಿರಿಯ ಅಭಿಯಂತರರು (ಬೆಸ್ಕಾಂ) |
| 5. | ಶ್ರೀಮತಿ ಶಾಯಿದಾ | ಹಿರಿಯ ಆರೋಗ್ಯ ಪರಿವೀಕ್ಷಕರು |
| 6. | ಶ್ರೀಮತಿ ಡಾ.ಶಾಲೀನಿ ದೇಶಪಾಂಡೆ | ಹೆಚ್.ಎಂ.ಟಿ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು |
| 7. | ಶ್ರೀಮತಿ ಸುಮಾ ಶ್ರೀಧರ್ | ಸಾರ್ವಜನಿಕರು |
| 8. | ಶ್ರೀ. ಶ್ರೀನಿವಾಸ್. | ಸಾರ್ವಜನಿಕರು |
| 9. | ಶ್ರೀ. ಎಂ.ಆರ್.ಪ್ರಸಾದ್ | ಸಾರ್ವಜನಿಕರು |
| 10. | ಶ್ರೀಮತಿ ವಿಜಯಾ ವಿ ಗೌಡ | ಸಾರ್ವಜನಿಕರು |
| 11. | ಶ್ರೀ.ಬಸವರಾಜ್ | ಸಾರ್ವಜನಿಕರು |

ವಾರ್ಡ್ ಕಾರ್ಯದರ್ಶಿಗಳಾದ ಶ್ರೀ.ಮೋಹನ್‌ಕುಮಾರ್ ರವರು ಸಭೆಗೆ ಹಾಜರಾಗಿದ್ದ ಸಾರ್ವಜನಿಕರಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಹಾಗೂ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ವಿಸ್ತಾರವಾಗಿ ಮಾತನಾಡಲು ಕೋರಲಾಯಿತು.

1. 108 ಬಸ್ ನಿಲ್ದಾಣದ ಪಾದಚಾರಿ ಮಾರ್ಗದ ಮೇಲೆ ನಿಲುಗಡೆ ಮಾಡುವ ತಳ್ಳುವ ಗಾಡಿಗಳನ್ನು ಮತ್ತು ರಸ್ತೆ ಮೇಲೆ ಇರುವ ಗಾಡಿಗಳನ್ನು ತೆರವುಗೊಳಿಸುವಂತೆ ಸಾರ್ವಜನಿಕರು ಮನವಿಯನ್ನು ಸಲ್ಲಿಸಿದರು.
2. ಸಿ.ಎ-5 ಗ್ರೌಂಡ್‌ನಲ್ಲಿ ಫೆನ್ಸಿಂಗ್ ಮತ್ತು ವಾಕಿಂಗ್ ಟ್ರಾಕ್ ಮತ್ತು ಮಳೆನೀರು ಕೊಯ್ಲು ಘಟಕವನ್ನು ಮಾಡಿಕೊಡಲು ವಾರ್ಡ್‌ನ ಸಾರ್ವಜನಿಕರು ಮನವಿಯನ್ನು ಸಲ್ಲಿಸಿದರು.
3. ಪ್ರೆಸಿಡೆನ್ಸಿ ಶಾಲೆಯ ಮುಂಭಾಗದ ರಸ್ತೆಯಲ್ಲಿ ಸುಮಾರು ವಾಹನಗಳನ್ನು ನಿಲ್ಲಿಸುವುದರಿಂದ ಸಂಚಾರ ದಟ್ಟಣೆ ಉಂಟಾಗುತ್ತಿದ್ದು, ಸಂಚಾರಿ ಪೋಲೀಸರು ಸಂಚಾರಿ ದಟ್ಟಣೆಯನ್ನು ಸರಿಪಡಿಸುವಂತೆ ಸಾರ್ವಜನಿಕರು ಮನವಿಯನ್ನು ಸಲ್ಲಿಸಿದರು ಹಾಗೂ ಅನಧಕೃತವಾಗಿ ನಿಲುಗಡೆ ಮಾಡುವ ವಾಹನಗಳನ್ನು ತೆರವುಗೊಳಿಸುವಂತೆ ಮನವಿಯನ್ನು ಸಲ್ಲಿಸಲಾಯಿತು.

4. ವಾರ್ಡ್‌ನಲ್ಲಿ ಸುಮಾರು ಕಡೆ ಜೋತು ಬಿದ್ದಿರುವ ಮರದ ರೆಂಬೆ ಕೊಂಬೆಗಳನ್ನು ಕತ್ತರಿಸಿ ತೆರವುಗೊಳಿಸುವಂತೆ ಅರಣ್ಯ ಅಧಿಕಾರಿಗಳಿಗೆ ತಿಳಿಸಲಾಯಿತು.
5. ವಾರ್ಡ್‌ನ ಸುಮಾರು ಕಡೆಗಳಲ್ಲಿ ದುರಸ್ಥಿಯಲ್ಲಿರುವ ಬೀದಿ ದೀಪಗಳನ್ನು ಸರಿಪಡಿಸಿಕೊಡುವಂತೆ ಬೀದಿ ದೀಪಗಳ ನಿರ್ವಹಣೆಯ ವಿಭಾಗದವರಿಗೆ ತಿಳಿಸಲಾಯಿತು.

ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

AE

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ: 20 ಗಂಗಾನಗರ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ: 20 ಗಂಗಾನಗರ

AEE, CVR ngr